ನೋಡಿ – ಭಯಂಕರ ಭಯವನ್ನೂ, ಮತಿಗೆಟ್ಟ ಖುಷಿಯನ್ನೂ ಒಟ್ಟೊಟ್ಟಿಗೆ ಅನುಭವಿಸುತ್ತ ಮುಂದೇನೆಂದು ಯೋಚಿಸಿದೆ.

'ಡು ಯೂ ರಿಮೆಂಬರ್ ಮಿಸೆಸ್ ಶಾರ್ವರೀಚಾರೀ ಅಟ್‌ಲೀಸ್ಟ್?' ಸದರಿ ಚಾರೀ–ಮಹಾಶಯನು, ಕಡೆಗೂ ಹೀಗೆ, ತನ್ನ ಕುರಿತಿನ್ನೊಂದು ಸುಳುಹು ಹೇಳಿದನಷ್ಟೆ–ನನಗೆ ತಕ್ಷಣ ಯಾರೆಂದು ಹೊಳೆದುಬಿಟ್ಟಿತು. ಮಳೆಯ ಕದ್ದಿಂಗಳಿನಲ್ಲಿ ಮಿಂಚು ಫಳಿಸಿದ ಹಾಗೆ ಹೊಳೆದುಬಂತು. ಅಂದರೆ... ಅಂದರೆ... ಈತನು ಶಾರ್ವರೀಚಾರಿಯ ಗಂಡಮಹಾಶಯನೇ? ಈ ಮುನ್ನ ನೋಡಿದ ನೆನಪೇ ಇಲ್ಲವಲ್ಲ... ಅಂದುಕೊಳ್ಳುತ್ತ, ಅವನ ಚಹರೆ–ಚರ್ಯೆಗಳನ್ನು ವಿಶದವಾಗಿ ತಡಕುವ ಹೊತ್ತಿಗೆ, ಆತನು ಪುನಃ ಮುಸುಡಿಗೆ ಮಾಸ್ಕೇರಿಸಿಕೊಂಡು ತನ್ನ ಅರ್ಧಕ್ಕರ್ಧ ಗುರುತನ್ನೆಲ್ಲ ಆ 'ಕೇಸರಿ'ಯೊಳಗೆ ಹುದುಗಗೊಟ್ಟು ಅವಿಸಿಬಿಟ್ಟ.

ಇರಲಿ. ಈ 'ಶಾರ್ವರೀಚಾರಿ' ನನ್ನ ಪ್ರಾಕ್ಟೀಸಿನ ಶುರುಶುರುವಿನ ದಿನಗಳಲ್ಲಿ ನನ್ನ ಕೆಲಸದೊಡನೆ ಸಾಕಷ್ಟು ತಳುಕಿಕೊಂಡಿದ್ದ ಹೆಸರು. ಈಕೆ, ವೈಟ್‌ಫೀಲ್ಡಿನಾಚೆಯ 'ಪಾಮ್ ಮೆಡೋಸ್' ಅಂತೊಂದು ಗೇಟೆಡ್ ಕಮ್ಯುನಿಟಿಯಲ್ಲಿ, ಆ ಕಾಲಕ್ಕೇ ಇನ್ನೂರಿನ್ನೂರೈವತ್ತು ಚದರದ ಮನೆಕಟ್ಟಿಸಿದ್ದಳೆಂದರೆ – ಯಾವ ಮಟ್ಟದ ಐಷಾರಾಮವೆಂದು ಯಾರೂ ಲೆಕ್ಕಿಸಬಹುದು. ವಿಶಾಲವಾದ ಮನೆ. ಅಷ್ಟೇ ಉದಾರವಾಗಿ ಲಾನುಗೀನು ಗಾರ್ಡನು ಲ್ಯಾಂಡ್‌ಸ್ಕೇಪಿದ್ದ ಹೊರಾಂಗಣ. ಒಳಗಿರುವಾಗಲೂ ಆಕಾಶಕ್ಕೆ ತೆರೆದುಕೊಂಡಂತನ್ನಿಸುವ ಮುಕ್ತರಚನೆ. ಈ ಮನೆಯ ವಿನ್ಯಾಸಕ್ಕಾಗಿ ನನಗೆ ರಾಷ್ಟ್ರಮಟ್ಟದ ಪ್ರಶಸ್ತಿಯೂ ಬಂದಿತ್ತು. ನಿಜಕ್ಕಾದರೆ, ಅಂಬೆಗಾಲಿನಲ್ಲಿ ತೆವಳುತ್ತಿದ್ದ ನನ್ನ ಉದ್ದಿಮೆಯು ಒಮ್ಮಿಂದೊಮ್ಮೆ ಎದ್ದು ನಡೆದಿದ್ದೇ ಈ ಪ್ರಾಜೆಕ್ಟಿನ ತರುವಾಯ. ಹಣಕ್ಕೆ ಹಣ, ಹೆಸರಿಗೆ ಹೆಸರು ಒಟ್ಟೊಟ್ಟಿಗೆ ಆಗಿಬಂದಿದ್ದವು.

'ಓಹ್ ಮಿಸ್ಟರ್ ಚಾರೀ, ಲಾಂಗ್ ಟೈಮ್...' ಅನ್ನುತ್ತ ಇನ್ನಿರದ ದೇಶಾವರಿಯ ನಗು ನಕ್ಕೆ.

'ಕರ್ನಲ್ ಚಾರೀ...' ಆತ ಹುಬ್ಬಿನ ಮೇಲೊಂದು ಗಂಟುತಳೆದು ನನ್ನನ್ನು ತಿದ್ದಿದ.

'ಯೆಸ್ ಯೆಸ್, ಕರ್ನಲ್ ಚಾರೀ...' ಎಚ್ಚರವಹಿಸಿ ಸಂಬೋಧನೆಯನ್ನು ತಿದ್ದಿ ಹೇಳಿದೆ. 'ಎಷ್ಟು ವರ್ಷಗಳಾದವು, ನಿಮ್ಮನ್ನ ನೋಡಿ... ಏನು ಕತೆ... ಹೋಪ್ ಆಲ್ ಇಜ್ ವೆಲ್.'

'ಹೌದು, ನಾವು ಈ ಹಿಂದೆ ಮೀಟ್ ಮಾಡಿದ್ದು ನೈನ್ಟೀನ್ ನೈನ್ಟೀ ಏಯ್ಟಲ್ಲೀಂದರೆ ಲೆಕ್ಕ ಹಾಕ್ಕೊಳ್ಳಿ... ಇಪ್ಪತ್ತಮೂರು ಇಪ್ಪತ್ತನಾಲ್ಕು ವರುಷ ಆದುವಲ್ಲವಾ?'

'ಯೆಸ್ ಯೆಸ್...'

'ಹವ್ವಾರ್ ಥಿಂಗ್ಸ್ ವಿತ್ಯೂ?'

'ಸೋ ಫಾರ್ ಸೋ ಗುಡ್. ಸರ್ವೈವಿಂಗ್... ಈ ಹಾಳುಕ್ರಿಮಿಯ ಹೊರತಾಗಿ ಬೇರೆ ದೂರಿಲ್ಲ – ನೋಡಿ...'

'ಟ್ರೂ...' ಅಂತಂದ ಚಾರಿ, ಒಮ್ಮೆಗೇ ಇನ್ನೇನೋ ನೆನೆದವನಂತೆ, 'ಹ್ಞಾಂ. ನಿಮಗೆ ಅಂಕಿತಾ ಗೊತ್ತಲ್ಲವಾ? ಅಂಕಿತಾ ಸಹಸ್ರಪುತ್ರೇ... ಶೀ ಈಸ್ ಮೈ ನೀಸ್... ನನ್ನ ತಂಗಿಯ ಮಗಳು.' ಎಂದು ಹೇಳಿದ.

ನಾನು, 'ಹೌದೇನು?' ಎಂಬ ಇಂಗಿತವುಳ್ಳ ಮಾತಿಲ್ಲದ ಅಚ್ಚರಿ ತೋರಿದೆ.

ಇನ್ನು, ಅಂಕಿತಾ ಅಂತೆಂಬ ಇಪ್ಪತ್ತೆರಡು ವಯಸ್ಸಿನ ಹುಡುಗಿ ನನ್ನ ಆಫೀಸಿನಲ್ಲಿ ಇಂಟರ್ನ್‌ಶಿಪ್ಪಿಗೆ ಸೇರಿದ್ದಳು. ಪ್ಯಾಂಡೆಮಿಕ್ಕಿಗೆ ತುಸುಮೊದಲು. ಅಂದರೆ, ಕೋವಿಡ್ ಪ್ರಯುಕ್ತವಾಗಿ ಮೊದಲ ಲಾಕ್‌ಡೌನ್ ಸುರುಗೊಂಡ ಸುಮಾರಿನಲ್ಲಿ, ಆವಾಗಲಷ್ಟೇ ಆರು ತಿಂಗಳ ಮಟ್ಟಿಗಿನ ಅವಳ ಟ್ರೇನಿಂಗ್ ಮುಗಿದಿತ್ತು. ಸಹಸ್ರಪುತ್ರೆ ಈ ಹುಡುಗಿಯ ಸರ್ನೇಮು. 'ಸಾವಿರ ಮಕ್ಕಳ ತಾಯಿ' ಎಂದು ನನ್ನ